# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570006**

**ದಿನಾಂಕ: 02.12.2025** ರಂದು **ಪೂರ್ವಾಹ್ನ 11.30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಆಯೋಜಿಸಿರುವ ವ್ಯವಸ್ಥಾಪನಾ ಮಂಡಳಿಯ **63ನೇ** ವಿಶೇಷ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ.**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ರಾಮನಾಥಂ ನಾಯುಡು .ಎಂ**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ. |
| **ಡಾ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು<br>ಗೂಂಜ್, ಕಲಬುರಗಿ - 585104 | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಡಾ. ಮಹೇಶ್ .ಎಸ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಸೋಸಲೆ ಗ್ರಾಮ ಮತ್ತು ಅಂಚೆ,<br>ಟಿ. ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ - 571120. |
| **ಶ್ರೀಮತಿ. ಮಾಲತಿ .ಟಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 355/1, ಮೊದಲ ಮಹಡಿ,<br>9ನೇ ಕ್ರಾಸ್, ಬಾಪೂಜಿ ಬಡಾವಣೆ,<br>ಚಂದ್ರಾ ಲೇಔಟ್, ಬೆಂಗಳೂರು - 560040. | **ಶ್ರೀಮತಿ. ಪ್ರಾಚಿ ಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. ಇ–402, ಡಾ. ವಿಷ್ಣುವರ್ಧನ್ ರೋಡ್,<br>ಬನಶಂಕರಿ, ಬೆಂಗಳೂರು - 560098. |

**ಕುಲಪತಿಗಳು** **ಕುಲಸಚಿವರು**

| | |
|---|---|
| **ಶ್ರೀ. ರಮೇಶ್ ಗುಬ್ಬೇವಾಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಗುಬ್ಬೇವಾಡ, ಸಿಂಧಗಿ ತಾಲ್ಲೂಕು,<br>ವಿಜಯಪುರ ಜಿಲ್ಲೆ. | **ಶ್ರೀ ಮಂಜು .ಆರ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಹಳ್ಳಿದಿಡ್ಡಿ ಗ್ರಾ., ಯೇಚಗಳ್ಳಿ ಅಂಚೆ,<br>ನಂಜನಗೂಡು ತಾಲ್ಲೂಕು,<br>ಮೈಸೂರು ಜಿಲ್ಲೆ - 571302. |
| **ಅನುಪಸ್ಥಿತರು** | |
| **ಅಪರ ಮುಖ್ಯ ಕಾರ್ಯದರ್ಶಿಗಳು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001. | **ಅಪರ ಮುಖ್ಯ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001 |

**ಕುಲಸಚಿವರ ಸ್ವಾಗತದೊಂದಿಗೆ ಸಭೆಯು ಪ್ರಾರಂಭವಾಯಿತು.**

ಮಾನ್ಯ ಕುಲಪತಿಗಳು ಮಾತನಾಡಿ, 63ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ವಿಷಯಸೂಚಿ ಪ್ರಕಾರ ವಿವರಿಸಲು ಕುಲಸಚಿವರಿಗೆ ಸೂಚಿಸಿದರು.

ಕುಲಸಚಿವರು ಇಂದಿನ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ವಿವರಗಳನ್ನು ಸಭೆಗೆ ಮಂಡಿಸಿದರು.

ಪ್ರಪ್ರಥಮವಾಗಿ ವಿಶ್ವವಿದ್ಯಾನಿಲಯದಲ್ಲಿ ಈ ಮೊದಲು ಪ್ರಾರಂಭಿಸಿದ ಸಹಭಾಗಿತ್ವ ಸಂಸ್ಥೆಗಳ ವಿಷಯದ ವಿವರಗಳ ಬಗ್ಗೆ ಈಗಾಗಲೇ ಕ್ಯೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳು ನಡೆದಿದ್ದು, ಅಂದಿನ ಸಮಯದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಸಹಭಾಗಿತ್ವ ಸಂಸ್ಥೆಗಳ ನಡುವೆ ನಡೆದಿರುವ ಒಪ್ಪಂದವು ಸಹಭಾಗಿತ್ವ ಸಂಸ್ಥೆಗಳು ನಡೆಸುವ ಕೋರ್ಸುಗಳಿಗೆ ನಿಗಧಿಪಡಿಸಿರುವ ಪ್ರವೇಶಾತಿ ಶುಲ್ಕಗಳಲ್ಲಿ ಸಹಭಾಗಿತ್ವ ಸಂಸ್ಥೆಗಳಿಗೆ ಶೇ. 75ರಷ್ಟು ಶುಲ್ಕವನ್ನು ಕಡಿತಗೊಳಿಸಿ, ಉಳಿದ ಶೇ. 25ರಷ್ಟು ಮಾತ್ರ ವಿಶ್ವವಿದ್ಯಾನಿಲಯಕ್ಕೆ ಪಡೆಯಲಾಗುತ್ತಿದ್ದು, ಅದರಲ್ಲಿ ಈ ಹಿಂದೆ ಪ್ರವೇಶಾತಿ ಪಡೆದಿರುವ ಬಗ್ಗೆ ದಾಖಲಾತಿಗಳು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವುದಿಲ್ಲವೆಂದು ವಿಶ್ವವಿದ್ಯಾನಿಲಯದ ನೌಕರರೇ ದಿನಾಂಕ: 20.11.2025ರಂದು ನಡೆದ ಸಭೆಯಲ್ಲಿ ತಿಳಿಸಿರುತ್ತಾರೆ ಎಂದು ಸದಸ್ಯರಾದ ಶ್ರೀ. ಹರೀಶ್ ಗೌಡರವರು ಸಭೆಗೆ ತಿಳಿಸಿದರು.

ಮುಂದುವರೆದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2008 ರಿಂದ 2014-15ನೇ ಸಾಲಿನವರೆಗೆ ಈ ಸಹಭಾಗಿತ್ವ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡು ನಮ್ಮ ದೇಶದಲ್ಲಿ ಅಲ್ಲದೇ ಹೊರ ದೇಶಗಳಲ್ಲಿಯೂ ಕರಾಮುವಿಯ ಸಹಭಾಗಿತ್ವ ಸಂಸ್ಥೆಗಳ ಎಜೆನ್ಸಿಗಳನ್ನು ತರೆಯಲಾಗಿತ್ತು, ಇವುಗಳನ್ನು ತೆರೆದ ಸ್ಥಳಗಳಲ್ಲಿ ಮತ್ತು ಚಿಕ್ಕ ಚಿಕ್ಕ ಕೊಠಡಿಗಳಲ್ಲಿ ಕರಾಮುವಿ ಸಹಭಾಗಿತ್ವ ಸಂಸ್ಥೆಗಳನ್ನು ತೆರೆದು ವಿದ್ಯಾರ್ಥಿಗಳಿಂದ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಸಂಬಂಧದ ಪ್ರವೇಶಾತಿ ಶುಲ್ಕಗಳನ್ನು ಹೆಚ್ಚು ಮೊತ್ತಗಳಲ್ಲಿ ಸುಲಿಗೆ ಮಾಡಿರುತ್ತಾರೆ. ಈ ಸಹಭಾಗಿತ್ವ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಇತರೆ ಪ್ರವೇಶಾತಿ ಪಡೆಯದೇ ಇರುವ ವಿದ್ಯಾರ್ಥಿಗಳನ್ನು ಸಹಭಾಗಿತ್ವ ಸಂಸ್ಥೆಗಳೇ ವಿದ್ಯಾರ್ಥಿಗಳು ಇಚ್ಚಿಸಿದ ಕೋರ್ಸುಗಳಿಗೆ ಪರೀಕ್ಷೆಗೆ ಹಾಜರಾಗಿರುವ ಬಗ್ಗೆ ಅವರುಗಳ ಡಾಟಾವನ್ನು ಪೆನ್‌ಡ್ರೈವ್ ಮೂಲಕ ತಂದು ವಿಶ್ವವಿದ್ಯಾನಿಲಯಕ್ಕೆ ನೀಡಿ ಅವುಗಳ ಪ್ರಕಾರ ವಿಶ್ವವಿದ್ಯಾನಿಲಯದಿಂದ ಅಂಕಪಟ್ಟಿಗಳನ್ನು ಮುದ್ರಿಸಿ ಅವುಗಳನ್ನು ವಿತರಿಸಲಾಗಿರುತ್ತದೆ. ಸದರಿಯವರುಗಳಿಗೆ ಸರ್ಕಾರಿ / ಅರೆ ಸರ್ಕಾರಿ / ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಲಭಿಸಿ ಅವರುಗಳು ಕೆಲಸ ನಿರ್ವಹಣೆ ಮಾಡುತ್ತಿರುವ ಸಂದರ್ಭದಲ್ಲಿ ಮುಂದಿನ ಬಡ್ತಿಗಾಗಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರ, ನೈಜ್ಯತೆ / ಋಜತ್ವಕ್ಕೆ ಪತ್ರ ಬರುತ್ತಿದ್ದು, ಅವುಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪರಿಶೀಲಿಸಲಾಗಿದ್ದು, ಅವರುಗಳು ಪ್ರವೇಶಾತಿ ಪಡೆದಿರುವ ಬಗ್ಗೆ ಮಾಹಿತಿ / ವಿವರಗಳು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವುದಿಲ್ಲ. ಅವರುಗಳಿಗೆ ನೈಜ್ಯತೆಯಾಗಲಿ / ಋಜತ್ವವಾಗಲಿ ನೀಡಲು ಬರುವುದಿಲ್ಲವೆಂದು ಇಲ್ಲಿಯ ನೌಕರರುಗಳೇ ತಿಳಿಸಿರುವುದರಿಂದ ಇವುಗಳನ್ನು ಯಾವ ರೀತಿಯಲ್ಲಿ ನೀಡುತ್ತೀರಾ ಎಂದು ಕೇಳಿದರು.

ಕುಲಪತಿಗಳು ಕುಲಸಚಿವರು

ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಏಳು ವಿದ್ಯಾರ್ಥಿಗಳು ಸುಪ್ರಿಂ ಕೋರ್ಟ್‌ನಲ್ಲಿ ವ್ಯಾಜ್ಯವನ್ನು ನಡೆಸಿ, ಸದರಿ ವ್ಯಾಜ್ಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮತ್ತು ಸಹಭಾಗಿತ್ವ ಸಂಸ್ಥೆಗಳ ಮುಖಾಂತರ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದು ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಅಂಕಪಟ್ಟಿಗಳನ್ನು ವಿತರಿಸಲಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಋಜತ್ವದ ಪ್ರಮಾಣ ಪತ್ರಗಳನ್ನು ನೀಡಲು ಸುಪ್ರೀಂಕೋರ್ಟ್ ವ್ಯಾಜ್ಯಗಳ ತೀರ್ಮಾನಗಳಲ್ಲಿ ತಿಳಿಸಿರುತ್ತಾರೆಂದು ಮಾನ್ಯ ಕುಲಪತಿಗಳು ತಿಳಿಸಿದರು.

ಸದಸ್ಯರಾದ ಶ್ರೀ.ಹರೀಶ್‌ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳು ಕರಾಮುವಿಯ ಪ್ರವೇಶಾತಿಯ ಪಡೆದಿದ್ದು, ಅವರುಗಳ ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಋಜತ್ವದ ಪ್ರಮಾಣ ಪತ್ರಗಳನ್ನು ನೀಡಲು ಸುಪ್ರೀಂ ಕೋರ್ಟ್ ವ್ಯಾಜ್ಯಗಳ ತೀರ್ಮಾನಗಳಲ್ಲಿ ತಿಳಿಸಿರುತ್ತಾರೆ ಅವುಗಳನ್ನು ನೀಡಬೇಕು. ಅವುಗಳನ್ನು ಎಲ್ಲರೂ ಪಾಲಿಸಬೇಕಾಗುತ್ತದೆ. ಇಲ್ಲವಾದಲ್ಲಿ Contempt of Court ಆಗುತ್ತದೆ ಎಂದು ದಿನಾಂಕ:29.11.2025ರ ಸಭೆಯ ನಡಾವಳಿಯಲ್ಲಿ ತಿಳಿಸಿರುತ್ತೀರಿ. ಇವುಗಳನ್ನು ನೋಡಿದರೆ ವಿಶ್ವವಿದ್ಯಾನಿಲಯದಿಂದ ನೇಮಕ ಮಾಡಿರುವ ವಕೀಲರುಗಳು ಸರಿಯಾದ ರೀತಿಯಲ್ಲಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಣೆ ಮಾಡುತ್ತಿರುವುದಿಲ್ಲವೆಂದು ಕಂಡುಬರುತ್ತದೆ. ಸರಿಯಾದ ವಕೀಲರುಗಳನ್ನು ನೇಮಕ ಮಾಡಬೇಕು ಅದನ್ನು ಬಿಟ್ಟು ಏನೂ ತಿಳಿಯದ ವಕೀಲರುಗಳನ್ನು ನೇಮಕ ಮಾಡುವುದರಿಂದ ಈ ರೀತಿಯ ತೀರ್ಮಾನಗಳು ವಿಶ್ವವಿದ್ಯಾನಿಲಯಕ್ಕೆ ಬರುತ್ತಿರುತ್ತವೆ. ಈಗಾಗಲೇ ಏಳು ಪ್ರಕರಣಗಳಿಗೆ ಸಂಬಂಧಿಸಿದಂತೆ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಋಜತ್ವದ ಪ್ರಮಾಣ ಪತ್ರಗಳನ್ನು ನೀಡಲು ತೀರ್ಮಾನವಾಗಿದ್ದು, ಅವುಗಳನ್ನು ಪಾಲನೆ ಮಾಡದಿದ್ದಲ್ಲಿ Contempt of Court ಆಗುತ್ತದೆ ಎಂದು ತಿಳಿಸಿದ್ದು, ಇವುಗಳನ್ನು ಮಾಡಿರುವುದರಿಂದ ಈಗಾಗಲೇ ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬಂದಿದ್ದು, ಇವುಗಳ ಬಗ್ಗೆ ಈಗಾಗಲೇ CBI, Lokayuktha, ED ಇನ್ನಿತರೆ ಸಂಸ್ಥೆಗಳಿಂದ ವಿಚಾರಣೆ ನಡೆಯುತ್ತಿದೆ ಎಂದು ತಿಳಿಸಿದರು.

ಆದಾಗ್ಯೂ, ಈ ವಿಷಯದ ಬಗ್ಗೆ 2013–14 ರಿಂದ 2017–18ನೇ ಸಾಲಿನವರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ನಡೆಸುವ ಕೋರ್ಸುಗಳಿಗೆ ಮಾನ್ಯತೆ ರದ್ದಾಗಿದ್ದು, ಇದರಿಂದ ವಿಶ್ವವಿದ್ಯಾನಿಲಯದ ಎದುರಿಸಿರುವ ಸಮಸ್ಯೆಗಳೇನು ಎಂದು ನಮಗೆ ತಿಳಿದಿರುತ್ತದೆ ಎಂದು ತಿಳಿಸಿ, ದಿನಾಂಕ: 29.11.2025ರಂದು ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ನಿವೃತ್ತ ನ್ಯಾಯಾಧೀಶರು, ವಿಶ್ವವಿದ್ಯಾನಿಲಯದ ವಕೀಲರುಗಳು, ಶಾಸನಬದ್ಧ ಅಧಿಕಾರಿಗಳು ಹಾಗೂ ಪರೀಕ್ಷಾ ವಿಭಾಗದ ಅಧಿಕಾರಿ / ಸಿಬ್ಬಂದಿಗಳೊಂದಿಗೆ ಅಯೋಜಿಸಿದ್ದ ಸಭೆಯಲ್ಲಿ ಕೈಗೊಂಡ ತೀರ್ಮಾನಗಳಿಗೆ ನಮ್ಮ ಸಮ್ಮತಿ ಇರುವುದಿಲ್ಲ. ಇವುಗಳನ್ನು ಮಾಡಿದರೆ ನಮ್ಮ ವ್ಯವಸ್ಥಾಪನ ಮಂಡಳಿ ಸಭೆಯ ಎಲ್ಲಾ ಸದಸ್ಯರುಗಳು ಮೇಲೆ ಕೆಟ್ಟ ಅಭಿಪ್ರಾಯ ಬರುತ್ತದೆ, ಇದರಿಂದ ಸಾರ್ವಜನಿಕವಾಗಿ ನಾವುಗಳು ಸಹ ದೋಷಿತರಾಗುತ್ತವೆ. ಆದುದರಿಂದ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಯು.ಜಿ.ಸಿ ನಿಯಮಾವಳಿಗಳು / ಅವರು ಒಪ್ಪಿಗೆ ಪಡೆದು ನಿರ್ವಹಣೆ ಮಾಡಬೇಕೆಂದು ತಿಳಿಸಿದರು. ಯಾವುದೇ ಕಾರಣಕ್ಕೂ ಸಹ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಯಾವುದೇ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಋಜತ್ವದ ಪ್ರಮಾಣ ಪತ್ರಗಳನ್ನು ನೀಡಲು ನನ್ನ ಒಪ್ಪಿಗೆ ಇರುವುದಿಲ್ಲ. ಇದು ನನ್ನ ಅಭಿಪ್ರಾಯ ಹಾಗೂ ತೀರ್ಮಾನವಾಗಿರುತ್ತದೆ. ಇದೇ ರೀತಿ ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ತೀರ್ಮಾನಿಸುವುದು ಸೂಕ್ತವೆಂದು ತಿಳಿಸಿದರು.

ಸದಸ್ಯರಾದ ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ಈಗಾಗಲೇ ವಿಶ್ವವಿದ್ಯಾನಿಲಯ ಇದರಿಂದ ಸಮಸ್ಯೆಗಳನ್ನು ಎದುರಿಸಿದ್ದು, ಇಂತಹ ಸಮಸ್ಯೆಗಳು ಬಾರದ ರೀತಿಯಲ್ಲಿ ನಿರ್ವಹಣೆ ಮಾಡುವುದು ಸೂಕ್ತವಾಗಿರುತ್ತದೆ. ಆದುದರಿಂದ ಈಗಾಗಲೇ ಪೂರ್ಣ ವಿವರಗಳನ್ನು ಸದಸ್ಯರಾದ ಶ್ರೀ. ಹರೀಶ್ ಗೌಡರು ಈಗಾಗಲೇ ತಿಳಿಸಿರುತ್ತಾರೆ. ಕರಾಮುವಿಯ ಸಹಭಾಗಿತ್ವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿದ್ಯಾರ್ಥಿಗಳಿಗೆ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಋಜತ್ವದ ಪ್ರಮಾಣ ಪತ್ರಗಳನ್ನು ನೀಡಲು ನನ್ನ ಒಪ್ಪಿಗೆ ಇರುವುದಿಲ್ಲ.

ಕುಲಪತಿಗಳು ಕುಲಸಚಿವರು

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ಈಗಾಗಲೇ ಪೂರ್ಣ ವಿವರಗಳನ್ನು ಸದಸ್ಯರಾದ ಶ್ರೀ. ಕೆ. ಹರೀಶ್ ಗೌಡರು ಸಭೆಗೆ ತಿಳಿಸಿರುತ್ತಾರೆ. ಆದುದರಿಂದ ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಯಾವುದೇ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಖುಜತ್ವದ ಪ್ರಮಾಣ ಪತ್ರಗಳನ್ನು ನೀಡಲು ನನ್ನ ಒಪ್ಪಿಗೆ ಇರುವುದಿಲ್ಲ.

ಸದಸ್ಯರಾದ ಶ್ರೀ.ರಮೇಶ್ ಗುಬ್ಬೇವಾಡರವರು ಮಾತನಾಡಿ, ಶ್ರೀ. ಕೆ. ಹರೀಶ್ ಗೌಡರು ತಿಳಿಸಿರುವಂತೆ ನಮ್ಮ ತೀರ್ಮಾನವು ಅದೇ ಆಗಿರುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ. ಮಂಜು .ಆರ್ ರವರು ಮಾತನಾಡಿ ಈಗಾಗಲೇ ಹಲವು ಸದಸ್ಯರುಗಳು ಕೈಗೊಂಡಿರುವ ತೀರ್ಮಾನವೇ ನನ್ನ ತೀರ್ಮಾನವಾಗಿರುತ್ತದೆಂದು ತಿಳಿಸಿದರು.

ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಈಗಾಗಲೇ ಸದಸ್ಯರುಗಳು ತೀರ್ಮಾನಿಸಿರುವ ರೀತ್ಯಾ ನಮ್ಮದು ಸಹ ಅದೇ ತೀರ್ಮಾನವಾಗಿರುತ್ತದೆಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ. ಮಾಲತಿ. ಟಿ ರವರು ಮಾತನಾಡಿ ಈಗಾಗಲೇ ನಮ್ಮ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಅಂಕಪಟ್ಟಿಗಳನ್ನು ನೀಡಿದ್ದು, ಅವರುಗಳು ಈಗಾಗಲೇ ಸರ್ಕಾರಿ / ಅರೆ ಸರ್ಕಾರಿ / ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದು, ಅವರುಗಳು ಬಡ್ತಿ ನಿಮಿತ್ತ ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಖುಜತ್ವದ ಪ್ರಮಾಣ ಪತ್ರಗಳನ್ನು ಕೋರುತ್ತಿದ್ದು, ಅವುಗಳನ್ನು ನೀಡುವುದರಿಂದ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ತೊಂದರೆಯಾಗುವುದಾದರೆ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಯಾವುದೇ ಸರ್ಟಿಫಿಕೇಟ್ ನೀಡಲು ಬರುವುದಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ. ಪ್ರಾಚಿ ಗೌಡ ರವರು ಮಾತನಾಡಿ ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಯಾವುದೇ ಸರ್ಟಿಫಿಕೇಟ್ ನೀಡಲು ಬರುವುದಿಲ್ಲವೆಂದು ತಿಳಿಸಿದರು.

ಸದರಿ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದ ಯು.ಜಿ.ಸಿ ಗೆ ಪತ್ರ ಬರೆದು ಅವರಿಂದ ಅನುಮೋದನೆ ಪಡೆದು ಇವುಗಳನ್ನು ನಿರ್ವಹಣೆ ಮಾಡಬೇಕೆಂದು ತಿಳಿಸಿದರು. ಅಷ್ಟೇ ಅಲ್ಲದೇ ಮುಂದಿನ ದಿನಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಕೋರ್ಸುಗಳನ್ನು ನಡೆಸುವ ಬಗ್ಗೆ ಮಾನ್ಯತೆ ನೀಡಲು ನಮ್ಮ ವಿಶ್ವವಿದ್ಯಾನಿಲಯದಿಂದ ಮನವಿ ಪಿ.ಪಿ.ಆರ್ ಮತ್ತಿತರೆ ದಾಖಲಾತಿಗಳನ್ನು ನೀಡಿ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯವನ್ನು ನಡೆಸಿಕೊಂಡು ಹೋಗುವುದಕ್ಕೆ ಯು.ಜಿ.ಸಿ / ಡಿ.ಇ.ಬಿ ಮಾರ್ಗದರ್ಶನ ಅತ್ಯಂತ ಅವಶ್ಯಕವಾಗಿರುವುದರಿಂದ ಇವರಿಂದ ಆದೇಶ ಪಡೆದು ನಿರ್ವಹಣೆ ಮಾಡುವುದು ಸೂಕ್ತವೆಂದು ಹಲವು ಸದಸ್ಯರುಗಳು ಅಭಿಪ್ರಾಯವನ್ನು ಸೂಚಿಸಿದರು.

**<u>ತೀರ್ಮಾನ</u>: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಮತ್ತು ಇತರೆ ಸಂಸ್ಥೆಗಳು ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡು ಹಲವಾರು ಕೋರ್ಸುಗಳನ್ನು ನಡೆಸಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಈ ವಿಷಯವಾಗಿ ಏಳು ವಿದ್ಯಾರ್ಥಿಗಳು ಸುಪ್ರೀಂಕೋರ್ಟ್‌ನಲ್ಲಿ ವ್ಯಾಜ್ಯ ನಡೆಸಿ, ಸದರಿ ವ್ಯಾಜ್ಯದಲ್ಲಿ ಕರಾಮುವಿ ಹಾಗೂ ಸಹಭಾಗಿತ್ವ ಸಂಸ್ಥೆಗಳ ಮೂಲಕ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿ ಕೋರ್ಸ್ ಅನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಮತ್ತು ನೈಜ್ಯತೆ / ಖುಜತ್ವದ ಪ್ರಮಾಣ ಪತ್ರಗಳನ್ನು ನೀಡಲು ತೀರ್ಮಾನವಾಗಿರುವಂತಹ ವಿದ್ಯಾರ್ಥಿಗಳಿಗೆ ಅವುಗಳನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

#####

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ: 63.01**

**ವಿಷಯ: 67ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 13–08–2025ರಂದು ನಡೆದ 67ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನದ ನಡಾವಳಿಯನ್ನು, ಮುಂಬರುವ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ಡೀನ್(ಶೈಕ್ಷಣಿಕ) ರವರು 67ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಕೈಗೊಂಡ ತೀರ್ಮಾನದ ವಿವರಗಳನ್ನು ಸಭೆಗೆ ವಿವರಿಸಿದರು.

**ತೀರ್ಮಾನ: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 13–08–2025 ರಂದು ನಡೆದ 67ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

#####

**ವಿಷಯ ಸಂಖ್ಯೆ: 63.02**

**ವಿಷಯ: 37ನೇ ವಿಶೇಷ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 30–10–2025ರಂದು ನಡೆದ 37ನೇ ವಿಶೇಷ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನದ ನಡಾವಳಿಯನ್ನು, ದಿನಾಂಕ: 02.12.2025ರಂದು ನಡೆಯಲಿರುವ 63ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ಡೀನ್(ಶೈಕ್ಷಣಿಕ) ರವರು 37ನೇ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯಲ್ಲಿ ಮಂಡಿಸಿ ಕೈಗೊಂಡ ತೀರ್ಮಾನದ ವಿವರಗಳನ್ನು ಸಭೆಗೆ ವಿವರಿಸಿದರು.

**ತೀರ್ಮಾನ: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 30–10–2025 ರಂದು ನಡೆದ 37ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

#####

**ವಿಷಯ ಸಂಖ್ಯೆ: 63.03**

**ವಿಷಯ : ವಿ.ವಿ ನಿಲಯದ ವತಿಯಿಂದ ಗೌರವ ಡಾಕ್ಟರೇಟ್ (Doctor of Literature-D.Litt.) ಪ್ರಶಸ್ತಿ ನೀಡಲು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಸೂಚಿಸುವುದರ ಕುರಿತು.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 21ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಜನವರಿ–2026ರ ಎರಡನೇ ವಾರದಲ್ಲಿ ನಡೆಸಲು ಉದ್ದೇಶಿಸಿದ್ದು, ಸದರಿ ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ / ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor Of Literature-D.Litt) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದೆ. ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಿದ ವ್ಯಕ್ತಿಗಳ ಹೆಸರುಗಳನ್ನು "ಪರಿಶೀಲನಾ ಸಮಿತಿ"ಯ ಮುಂದೆ ಮಂಡಿಸಬೇಕಾಗಿರುತ್ತದೆ. ಪರಿಶೀಲನಾ ಸಮಿತಿಯು

**ಕುಲಪತಿಗಳು** **ಕುಲಸಚಿವರು**

ಶಿಫಾರಸ್ಸು ಮಾಡುವ ಗರಿಷ್ಠ ಮೂರು ಮಂದಿಯ ಹೆಸರುಗಳನ್ನು ಅಂತಿಮಗೊಳಿಸಲು ಘನತವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಎಂಬ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಿಂದ 21ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಜನವರಿ–2026ರ ಎರಡನೇ ವಾರದಲ್ಲಿ ನಡೆಸಲು ಉದ್ದೇಶಿಸಿದ್ದು, ಸದರಿ ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ / ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor Of Literature-D.Litt) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಿದ ವ್ಯಕ್ತಿಗಳ ಹೆಸರುಗಳನ್ನು "ಪರಿಶೀಲನಾ ಸಮಿತಿ"ಯ ಮುಂದೆ ಮಂಡಿಸಬೇಕಾಗಿರುತ್ತದೆ. ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡುವ ಗರಿಷ್ಠ ಮೂರು ಮಂದಿಯ ಹೆಸರುಗಳನ್ನು ಅಂತಿಮಗೊಳಿಸಲು ಘನತವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ತಮ್ಮಿಂದ ಯಾರಾದರು ಇದ್ದರೆ ಅವರುಗಳ ಹೆಸರು ಮತ್ತು ಪೂರ್ಣ ವಿವರಗಳನ್ನು ಕೂಡಲೇ ನೀಡಲು ತಿಳಿಸಿದರು.

**ತೀರ್ಮಾನ: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ತಮಗೆ ತಿಳಿದಿರುವವರ ಹೆಸರು ಮತ್ತು ಅವರುಗಳ ಪೂರ್ಣ ವಿವರಗಳನ್ನು ಕೂಡಲೇ ನೀಡಬೇಕೆಂದು ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 63.04**

**ವಿಷಯ: ವಿವಿನಿಲಯದ ಘಟಿಕೋತ್ಸವ ಭವನ ಮತ್ತು ಇತರೇ ಸಭಾಭವನಗಳನ್ನು ಸರ್ಕಾರದ ವಿವಿಧ ಇಲಾಖೆ / ಸರ್ಕಾರಿ/ ಅರೆ ಸರ್ಕಾರಿ / ಅನುದಾನಿತ / ಖಾಸಗಿ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಬಾಡಿಗೆ ಆಧಾರದ ಮೇಲೆ ನೀಡುವ ಬಗ್ಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಮುಕ್ತಗಂಗೋತ್ರಿ ಆವರಣದಲ್ಲಿ ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ನಳ ಸಭಾಂಗಣ, ಅತಿಥಿಗೃಹ, ಪುರಷರ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳನ್ನು ಒಳಗೊಂಡಂತೆ ವಿವಿಧ ಕಟ್ಟಡಗಳನ್ನು ತನ್ನ ಸ್ವಂತ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವುದರ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಇತರೇ ಸಂಘಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ಬಾಡಿಗೆಯ ಆಧಾರದ ಮೇಲೆ ನೀಡಲಾಗುತ್ತಿದೆ.

ಮುಂದುವರೆದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸರ್ಕಾರಿ/ ಅರೆ ಸರ್ಕಾರಿ/ ಅನುದಾನಿತ / ಖಾಸಗಿ ಸಂಘಸಂಸ್ಥೆಗಳು ತಮ್ಮ ಅಧೀಕೃತ ಕಾರ್ಯಕ್ರಮಗಳನ್ನು ನಡೆಸಲು ಸದರಿ ಘಟಿಕೋತ್ಸವ ಭವನ ಮತ್ತು ಇತರೇ ಸಭಾಭವನಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುವಂತೆ ಪತ್ರಗಳನ್ನು ನೀಡಲಿರುತ್ತಾರೆ.

ಆದ್ದರಿಂದ ಕೇಂದ್ರ/ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಘ ಸಂಸ್ಥೆಗಳು ತಮ್ಮ ಇಲಾಖೆ/ಸಂಸ್ಥೆಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ನಡೆಸಲು ಘಟಿಕೋತ್ಸವ ಭವನ ಮತ್ತು ಇತರೇ ಸಭಾ ಭವನಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುವಂತೆ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಸದರಿ ಸರ್ಕಾರದ ವಿವಿಧ ಇಲಾಖೆ / ಸ್ಥಳಿಯ ಸರ್ಕಾರಿ/ ಅನುದಾನಿತ / ಖಾಸಗಿ ಸಂಘ ಸಂಸ್ಥೆಗಳಿಗೆ ಬಾಡಿಗೆ ಆಧಾರದ ಮೇಲೆ ನೀಡುವುದರ ಬಗೆಗಿನ ವಿಷಯವನ್ನು ವಿವಿನಿಲಯದ ಘನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಾಯಕ್ಕಾಗಿ ಮಂಡಿಸಿದೆ.

*****

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಮುಕ್ತಗಂಗೋತ್ರಿ ಆವರಣದಲ್ಲಿ ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ನಳ ಸಭಾಂಗಣ, ಅತಿಥಿಗೃಹ, ಪುರುಷರ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳನ್ನು ಒಳಗೊಂಡಂತೆ ವಿವಿಧ ಕಟ್ಟಡಗಳನ್ನು ತನ್ನ ಸ್ವಂತ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವುದರ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಇತರೇ ಸಂಘ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ಬಾಡಿಗೆಯ ಆಧಾರದ ಮೇಲೆ ನೀಡಲಾಗುತ್ತಿದೆ. ಇವುಗಳನ್ನು ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸರ್ಕಾರಿ / ಅರೆ ಸರ್ಕಾರಿ / ಅನುದಾನಿತ ಮತ್ತು ಖಾಸಗಿ ಸಂಘ ಸಂಸ್ಥೆಗಳು ತಮ್ಮ ಇಲಾಖೆ / ಸಂಸ್ಥೆಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ನಡೆಸಲು ಘಟಿಕೋತ್ಸವ ಭವನ ಮತ್ತು ಇತರೇ ಸಭಾ ಭವನಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುವಂತೆ ಪತ್ರಗಳನ್ನು ಸಲ್ಲಿಸಿದ್ದಲ್ಲಿ, ಸದರಿ ಸರ್ಕಾರದ ವಿವಿಧ ಇಲಾಖೆ / ಸ್ಥಳಿಯ ಸರ್ಕಾರಿ / ಅನುದಾನಿತ / ಖಾಸಗಿ ಸಂಘ ಸಂಸ್ಥೆಗಳಿಗೆ ಬಾಡಿಗೆ ಆಧಾರದ ಮೇಲೆ ನೀಡುತ್ತಿದ್ದು, ಕೆಲವು ಸರ್ಕಾರಿ ಕಾರ್ಯಕ್ರಮಗಳಿಗೆ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಕೇಳುತ್ತಾರೆಂದು ಸಭೆಗೆ ವಿವರಿಸಿದರು.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸದಸ್ಯರಾದ ಶ್ರೀಮತಿ ಮಾಲತಿ. ಟಿ ರವರು ಮಾತನಾಡಿ ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸರ್ಕಾರಿ / ಅರೆ ಸರ್ಕಾರಿ / ಅನುದಾನಿತ ಮತ್ತು ಖಾಸಗಿ ಸಂಘ ಸಂಸ್ಥೆಗಳು ತಮ್ಮ ಇಲಾಖೆ / ಸಂಸ್ಥೆಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ನಡೆಸಲು ಘಟಿಕೋತ್ಸವ ಭವನ ಮತ್ತು ಇತರೇ ಸಭಾ ಭವನಗಳನ್ನು ಉಚಿತವಾಗಿ ನೀಡುವುದರಿಂದ ವಿಶ್ವವಿದ್ಯಾನಿಲಯದ ಮೇಲೆ ಹಣಕಾಸಿನ ಹೊರೆ ಬೀಳುತ್ತದೆ. ಸದರಿ ಸ್ಥಳಗಳನ್ನು ಉಚಿತವಾಗಿ ನೀಡುವುದರಿಂದ ಅವುಗಳ ನಿರ್ವಹಣೆಗಳನ್ನು ವಿಶ್ವವಿದ್ಯಾನಿಲಯದಿಂದ ಮಾಡಬೇಕಾಗಿರುತ್ತದೆ. ಅಷ್ಟೇ ಅಲ್ಲದೇ ವಿದ್ಯುಚ್ಛಕ್ತಿ ವೆಚ್ಚವನ್ನು ವಿಶ್ವವಿದ್ಯಾನಿಲಯವೇ ಭರಿಸಬೇಕಾಗುತ್ತದೆ. ಇದರಿಂದ ಯಾರಿಗೂ ಉಚಿತವಾಗಿ ನೀಡುವುದು ಸಮಂಜಸವಲ್ಲವೆಂದು ಅಭಿಪ್ರಾಯವನ್ನು ಸೂಚಿಸಿದರು.

ಸದಸ್ಯರಾದ ಶ್ರೀಮತಿ. ಪ್ರಾಚಿ ಗೌಡ ರವರು ಮಾತನಾಡಿ ವಿಶ್ವವಿದ್ಯಾನಿಲಯದ ಕಟ್ಟಡಗಳನ್ನು ಯಾರಿಗೂ ಉಚಿತವಾಗಿ ನೀಡುವುದು ಸಮಂಜಸವಲ್ಲವೆಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ, ರಮೇಶ್ ಗುಬ್ಬೇವಾಡರವರು ಮಾತನಾಡಿ ವಿಶ್ವವಿದ್ಯಾನಿಲಯದ ಕಟ್ಟಡಗಳನ್ನು ಉಚಿತವಾಗಿ ಯಾರಿಗೂ ನೀಡಬಾರದು ಕಾರಣವೇನೆಂದರೆ ಅವುಗಳ ಸ್ವಚ್ಛತಾ ಕಾರ್ಯವನ್ನು ವಿಶ್ವವಿದ್ಯಾನಿಲಯದ ನೌಕರರುಗಳೇ ಮಾಡಬೇಕು. ವಿದ್ಯುತ್ ಬಿಲ್‌ಗಳನ್ನು ವಿಶ್ವವಿದ್ಯಾನಿಲಯವೇ ಪಾವತಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸರ್ಕಾರಿ / ಅರೆ ಸರ್ಕಾರಿ / ಅನುದಾನಿತ ಮತ್ತು ಖಾಸಗಿ ಸಂಘ ಸಂಸ್ಥೆಗಳು ತಮ್ಮ ಇಲಾಖೆ / ಸಂಸ್ಥೆಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ನಡೆಸಲು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನ ಮತ್ತು ಇತರೇ ಸಭಾ ಭವನಗಳನ್ನು ಯಾರಿಗೂ ನೀಡಬಾರದೆಂದು ವ್ಯವಸ್ಥಾಪನ ಮಂಡಳಿ ಸದಸ್ಯರುಗಳಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಡಾ. ಮಹೇಶ್ .ಎಸ್ ಮತ್ತು ಶ್ರೀ. ಮಂಜು .ಆರ್ ರವರುಗಳು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸರ್ಕಾರಿ / ಅರೆ ಸರ್ಕಾರಿ / ಅನುದಾನಿತ ಮತ್ತು ಖಾಸಗಿ ಸಂಘ ಸಂಸ್ಥೆಗಳು ತಮ್ಮ ಇಲಾಖೆ / ಸಂಸ್ಥೆಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ನಡೆಸಲು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನ ಮತ್ತು ಇತರೇ ಸಭಾ ಭವನಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಈಗಾಗಲೇ ನಿಗಧಿಪಡಿಸಿರುವ ದರಗಳಿಗೆ ಅನುಗುಣವಾಗಿ ರಿಯಾಯಿತಿ ದರವನ್ನು ನೀಡುವಂತೆ ಪತ್ರಗಳಲ್ಲಿ ಕೋರಿದ್ದ ಪಕ್ಷದಲ್ಲಿ ಮಾತ್ರ ಅಂತಹ ಇಲಾಖೆ / ಸಂಸ್ಥೆ / ಏಜೆನ್ಸಿಗಳಿಗೆ ಗರಿಷ್ಠ ಶೇ.25 ಮಿತಿಯಲ್ಲಿ ಮಾತ್ರ ರಿಯಾಯಿತಿ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

#####

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ: 63.05**

**ವಿಷಯ: 38ನೇ ವಿಶೇಷ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 01–12–2025ರಂದು ನಡೆದ 38ನೇ ವಿಶೇಷ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನದ ನಡಾವಳಿಯನ್ನು, ದಿನಾಂಕ: 02.12.2025ರಂದು ನಡೆಯಲಿರುವ 63ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ಡೀನ್(ಶೈಕ್ಷಣಿಕ) ರವರು 38ನೇ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯಲ್ಲಿ ಮಂಡಿಸಿ ಕೈಗೊಂಡ ತೀರ್ಮಾನದ ವಿವರಗಳನ್ನು ಸಭೆಗೆ ವಿವರಿಸಿದರು.

**ವಿಷಯ ಸಂಖ್ಯೆ: 38.03**ರ ವಿಷಯಕ್ಕೆ ಸಂಬಂಧಿಸಿದಂತೆ, ಡಾ ಮಹೇಶ್ .ಎಸ್ ರವರು ಮಾತನಾಡಿ ದಿನಾಂಕ: 27.11.2025ರಂದು ವಿಶ್ವವಿದ್ಯಾನಿಲಯದಲ್ಲಿ ಜರುಗಿದ ದಾಸಶೇಷ್ಠ ಶ್ರೀ ಭಕ್ತ ಕನಕದಾಸರ 538ನೇ ಜಯಂತಿ ಆಚರಣೆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ತಿನ ಸದಸ್ಯರು ಮತ್ತು ಅಧ್ಯಕ್ಷರು ಆಶ್ರಯ ಸಮಿತಿ, ವರುಣ ಕ್ಷೇತ್ರ ರವರು ಆಗಮಿಸಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದಾಸಶೇಷ್ಠ ಶ್ರೀ ಭಕ್ತ ಕನಕದಾಸರ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವನ್ನು ಸ್ಥಾಪಿಸಿದ್ದಲ್ಲಿ, ನಾವು ಸಹ ಸರ್ಕಾರದ ಮಟ್ಟದಲ್ಲಿ ಈ ಪೀಠಕ್ಕೆ ಅನುದಾನವನ್ನು ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು ಎಂದು ಸಭೆಯ ಗಮನಕ್ಕೆ ತಂದರು.

**ವಿಷಯ ಸಂಖ್ಯೆ: 38.09**ರ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಈ ಸಭೆಯಲ್ಲಿ ಕೈಗೊಂಡ ತೀರ್ಮಾನದ ರೀತ್ಯಾ ಮುಂದಿನ ಕ್ರಮವಹಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನವಾಗಿರುವುದರಿಂದ ದಿನಾಂಕ: 29.11.2025ರಂದು ನಡೆದ ಸಭೆಯ ತೀರ್ಮಾನಕ್ಕೆ ಸಮ್ಮತಿ ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಇಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚಿಸಿದ್ದು, ಅದರಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 38.10**ರ ವಿಷಯಕ್ಕೆ ಸಂಬಂಧಿಸಿದಂತೆ, **Skybird College of Aviation & Management, New Delhi,** ರವರನ್ನು **E.L.S.C** ಎಂದು ಪರಿಗಣಿಸಿ, ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.

ಈ ವಿಷಯದ ಬಗ್ಗೆ ಈ ಹಿಂದೆ ವಿಶ್ವವಿದ್ಯಾನಿಲಯವು ತೊಂದರೆ ಅನುಭವಿಸಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ನೀಡಿರುವ ಪರಿಮಿತಿಗಳ ವ್ಯಾಪ್ತಿಯೊಳಗೆ ಮಾತ್ರ ಮಾಡಬೇಕೆಂದು ಡಾ. ಮಹೇಶ್ .ಎಸ್ ರವರು ಸಭೆಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕರ್ನಾಟಕ ರಾಜ್ಯದ ಒಳಗೆ ಮಾತ್ರ ಸೀಮಿತವಾಗಿದ್ದು, ರಾಜ್ಯದ ಹೊರ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಈಗಾಗಲೇ ವಿಶ್ವವಿದ್ಯಾನಿಲಯವು ತೊಂದರೆ ಅನುಭವಿಸಿದ್ದು, ಅದು ಮರುಕಳಿಸದ ರೀತಿಯಲ್ಲಿ ಕರ್ನಾಟಕ ರಾಜ್ಯದ ಒಳಗೆ ಇರುವ ಸಂಸ್ಥೆಗಳೊಂದಿಗೆ ಕೋರ್ಸುಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು** **ಕುಲಸಚಿವರು**

ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನ:

ತೀರ್ಮಾನ: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ:30-10-2025 ರಂದು ನಡೆದ 38ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯಲ್ಲಿ ವಿಷಯ ಸಂಖ್ಯೆ: 38.09 ಮತ್ತು 38.10ರ ವಿಷಯಕ್ಕೆ ಮೇಲ್ಕಂಡಂತೆ ತೀರ್ಮಾನವಾಗಿದ್ದು, ಅವುಗಳನ್ನು ಅಳವಡಿಸಿಕೊಳ್ಳತಕ್ಕದ್ದು, ಉಳಿದಂತೆ ಇತರೆ ವಿಷಯಗಳ ತೀರ್ಮಾನಗಳನ್ನು ಅನುಮೋದಿಸಲಾಯಿತು.

#####

**ವಿಷಯ ಸಂಖ್ಯೆ: 63.06**

**ವಿಷಯ: 92ನೇ ಹಣಕಾಸು ಸಮಿತಿ ಸಭೆಯ ನಡವಳಿಯನ್ನು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗೆಗೆ.**

– * –

ದಿನಾಂಕ: 02-12-2025ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ 92ನೇ ಹಣಕಾಸು ಸಮಿತಿ ಸಭೆಯ ನಡವಳಿಯನ್ನು 63ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 92ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಿತು.**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಂಡಿಸಿದ ವಿಷಯ:**

1) **ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ವೇತನ ಹೆಚ್ಚಳ ಮಾಡುವ ಬಗ್ಗೆ.**

– * –

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಎಲ್ಲಾ ನೌಕರರುಗಳಿಗೆಗೆ ವೇತನ ಹೆಚ್ಚಳ ಮಾಡಬೇಕೆಂದು ತಿಳಿಸಿದರು.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಇಂತಹ ವಿಷಯವನ್ನು ವಿಶ್ವವಿದ್ಯಾನಿಲಯದ ಕುಂದು-ಕೊರತೆಗಳ ಸಮಿತಿ ಸಭೆಯಲ್ಲಿ ಮಂಡಿಸಿ, ಅಲ್ಲಿಯ ತೀರ್ಮಾನವನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಮಾನ್ಯ ಕುಲಪತಿಗಳು ಮಂಡಿಸಿದ ವಿಷಯ:**

2) **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ನಿವೇಶನವನ್ನು ವಿಶ್ವವಿದ್ಯಾನಿಲಯದಿಂದ ಖರೀದಿಸಲಾಗಿರುವ ಸ್ಥಳದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಅಧಿಕೃತ ನಿವಾಸನವನ್ನು ನಿರ್ಮಾಣ ಮಾಡುವ ಬಗ್ಗೆ.**

– * –

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರು ನಗರದ ವಿಜಯನಗರದ 4ನೇ ಹಂತದಲ್ಲಿ ಈಗಾಗಲೇ 15.00 mt x 24.00 mt ಅಳತೆಯ ನಿವೇಶನವನ್ನು ಖರೀದಿಸಲಾಗಿದ್ದು, ಈ ಸ್ಥಳದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಅಧಿಕೃತ ನಿವಾಸನವನ್ನು ನಿರ್ಮಾಣ ಮಾಡಬೇಕಾಗಿರುತ್ತದೆಂದು ತಿಳಿಸಿದರು.

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈಗಾಗಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (**MUDA**) ವತಿಯಿಂದ ಮೈಸೂರಿನ ವಿಜಯನಗರದ 4ನೇ ಹಂತದಲ್ಲಿ **15.00 mt x 24.00 mt** ಅಳತೆಯ ನಿವೇಶನವನ್ನು (ಸೈಟ್ ನಂ: **831**) ವಿವಿನಿಲಯದಿಂದ ಖರೀದಿಸಲಾಗಿರುವ ಸ್ಥಳದಲ್ಲಿ, ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಸುಸಜ್ಜಿತ ಅಧಿಕೃತ ನಿವಾಸನವನ್ನು / ಕಟ್ಟಡವನ್ನು ನಿರ್ಮಾಣ ಮಾಡುವುದರ ಸಂಬಂಧ ನಿಯಮಾನುಸಾರ ಟೆಂಡರ್ ಕರೆದು ಕಾರ್ಯನಿರ್ವಹಿಸಲು ಸಭೆಯು ಅನುಮೋದನೆ ನೀಡಿತು.

#####

3) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗದ ಕಟ್ಟಡದಲ್ಲಿ ಹೆಚ್ಚುವರಿಯಾಗಿ ಮೂರನೇ ಮಹಡಿ ಕಟ್ಟಡವನ್ನು ನಿರ್ಮಾಣ ಮಾಡುವುದರ ಬಗ್ಗೆ.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಲಾಯಿತು.

#####

4) ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ **Kitchen** ಮತ್ತು **Dining Hall** ಅನ್ನು ವಿಸ್ತರಿಸಿ ನವೀಕರಿಸುವ ಹಾಗೂ ಇತರೆ ದುರಸ್ಥಿ ಕೆಲಸಗಳನ್ನು ನಿರ್ವಹಿಸುವುದರ ಬಗ್ಗೆ ಹಿಂದಿನ ವ್ಯವಸ್ಥಾಪನ ಮಂಡಳಿ ಸಭೆಯ ವಿಷಯ ಸಂಖ್ಯೆ: 184.13ರಲ್ಲಿ ಮಂಡಿಸಲಾಗಿದ್ದು, ಇದರ ತೀರ್ಮಾನದಲ್ಲಿ ಸಣ್ಣ ತಿದ್ದುಪಡಿಯಾಗಬೇಕೆಂದು ತಿಳಿಸಿದರು.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ **Kitchen** ಮತ್ತು **Dining Hall**ಅನ್ನು ವಿಸ್ತರಿಸಿ ನವೀಕರಿಸುವ ಇತರೆ ದುರಸ್ಥಿ ಕೆಲಸಗಳನ್ನು ನಿರ್ವಹಿಸುವುದರ ಸಂಬಂಧ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಲಾಯಿತು.

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 63ನೇ ವಿಶೇಷ ಸಭೆಗೆ ಮಾನ್ಯ ಸದಸ್ಯರುಗಳು ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರುಗಳಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಪತಿಗಳು

ಕುಲಸಚಿವರು